ಕರ್ನಾಟಕ ಸರ್ಕಾರ

# ತಹಶೀಲ್ದಾರರು ಹೊಸಪೇಟೆ ಇವರ ನ್ಯಾಯಾಲಯದ ನಡವಳಿಗಳು

ವಾದಿಗಳು ಪ್ರತಿವಾದಿಗಳು

| ವಾದಿಗಳು | ಪ್ರತಿವಾದಿಗಳು |
|---|---|
| ಗೊಲ್ಲರ ದುರುಗಮ್ಮ ಗಂಡ ದಿ:ಗೊಲ್ಲರ ಬಂಗಾರಪ್ಪ ವ್ಯಾಸನಕೆರೆ ಗ್ರಾಮ | ಕಂದಾಯ ನಿರೀಕ್ಷಕರು ಮರಿಯಮ್ಮನಹಳ್ಳಿ |

ಪೀಠಿಕೆ:-

ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಸಪೇಟೆ ತಾಲೂಕು ವ್ಯಾಸನಕೆರೆ ಗ್ರಾಮದ ಸ.ನಂ.259/ಎಬಿ,274/*ಎ ವಿಸ್ತೀರ್ಣ ಕ್ರಮವಾಗಿ 0.96,2.28 ಎಕರ ಜಮೀನಿನ ಪಟ್ಟದಾರರಾದ ಗೊಲ್ಲರ ಬಂಗಾರಪ್ಪ ತಂದೆ ಕೆಂಚಪ್ಪ ಇವರು ದಿನಾಂಕ 20-10-2010 ರಂದು ಮೃತ ಪಟ್ಟಿರುತ್ತಾರೆ. ಇವರ ಹೆಂಡಿತಿಯಾದ ಶ್ರೀಮತಿ ಗೊಲ್ಲರ ದುರುಗಮ್ಮ ಇವರು ಪೌತಿ ವಾರಸತ್ವ ಪ್ರಕಾರ ಹಕ್ಕುಬದಲಾವಣೆ ಮಾಡಲು ವಾದಿಯು ಈ ಕಾರ್ಯಾಲಯದ ಅರ್ಜಿ ಕಿಯೋಸ್ಕದಲ್ಲಿ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯ ಪ್ರಕಾರ ಹಕ್ಕುಬದಲಾವಣೆ ಮಾಡಲು ಕಂದಾಯ ನಿರೀಕ್ಷಕರು ಮರಿಯಮ್ಮನಹಳ್ಳಿ ಇವರು ಪ್ರಕ್ರಿಯೆ ಪ್ರಾರಂಭಿಸಲಾಗಿ ನಮೂನೆ-21ನ್ನು ಸಂಬಧಪಟ್ಟವರಿಗೆ ಜಾರಿ ಮಾಡಿ ಗ್ರಾಮದಲ್ಲಿ ಪ್ರಚೂರ ಪಡಿಸಿರುತ್ತಾರೆ.ಆದರೆ ವಾದಿಯ ಗಂಡನ ತಂದೆಯ ಹೆಸರು ಮರಣ ಪ್ರಮಾಣದಲ್ಲಿ ಕಟ್ಟೆಪ್ಪ ಎಂದು ಇದ್ದು,ಗಣಕೀಕೃತ ಪಹಣಿ ಸ,ನಂ.259/ಎಬಿ ವಿಸ್ತೀರ್ಣ 0.96 ರಲ್ಲಿ ಕೆಂಚಪ್ಪ ಎಂದು ವ್ಯತ್ಯಾಸ ಇರುವುದರಿಂದ ಸದರಿ ಹಕ್ಕುಬದಲಾವಣೆಯನ್ನು ಕಂದಾಯ ನಿರೀಕ್ಷಕರು ತಿರಸ್ಕರಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಸಂಬಂಧಿಸಿದವರಿಗೆ ನೋಟೀಸುಗಳನ್ನು ಜಾರಿಗೊಳಿಸಿ ಪ್ರಕರಣದಲ್ಲಿ ವಿಚಾರಣೆಯನ್ನು ದಿನಾಂಕ 14-07-2016 ರಂದು ಪ್ರರಂಬಿಸಿ ದಿನಾಂಖ 20-07-2016 ರಂದು ಅಂತಿಮಗೊಳಿಸಲಾಯಿತು. ಪ್ರಕರಣದಲ್ಲಿ ವಿಚಾರಣೆಗೆ ಕರೆಯಲಾಗಿ ವಾದಿ ವಿಚಾರಣೆಯಲ್ಲಿ ಹಾಜರಾಗಿರುತ್ತಾರೆ.ವಾದಿಗಳು, ತನ್ನ ಗಂಡನಾದ ದಿವಂಗತ ಗೊಲ್ಲರ ಬಂಗಾರಪ್ಪ ಇವರ ಹೆಂಡತಿಯಾಗಿದ್ದು,ಸದರಿ ಜಮೀನುಗಳು ನನ್ನ ಗಂಡನ ಹೆಸರಿನಲ್ಲಿದ್ದು,ಪೌತಿ ವಾರಸತ್ವ ಪ್ರಕಾರ ಹಕ್ಕುಬದಲಾವಣೆ ಮಾಡವಂತೆ ಹೇಳಿಕೆ ನೀಡಿರುತ್ತಾರೆ. ಕಾರಣ ಪೌತಿ ವಾರಸತ್ವ ಪ್ರಕಾರ ಈ ಕೆಳಗಿನಂತೆ.

**ನಂ.ಕಂ.ಪಹಣಿ.ತಕರಾರು/36/14-15** **ದಿನಾಂಕ 4-8-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ವಾಸ್ತಾವಾಂಶ ಹಿನ್ನಲೆ ಯಿಂದಾಗಿ ಹೊಸಪೇಟೆ ತಾಲೂಕಿನ ವ್ಯಾಸನಕೆರೆ ಗ್ರಾಮದ ಸ.ನಂ.259/ಎಬಿ,274/*ಎ ವಿಸ್ತೀರ್ಣ ಕ್ರಮವಾಗಿ 0.96,2.28 ಎಕರೆ ಜಮೀನನ್ನು ಪೋತಿ ವಾರಸತ್ವ ಪ್ರಕಾರ ಗೊಲ್ಲರ ದುರುಗಮ್ಮ ಗಂಡ ದಿ:ಗೊಲ್ಲರ ಬಂಗಾರಪ್ಪ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಆದೇಶಿಸಲಾಯಿತು.

ಈ ಆದೇಶವು ದಿನಾಂಕ **4-8-2016**ರ ಉಕ್ತ ಲೇಖನ ನೀಡಿ ತೆರದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಲಾಯಿತು.

ತಹಶೀಲ್ದಾರರು ಹೊಸಪೇಟೆ

ವಾದಿ ಮತ್ತು ಪ್ರತಿವಾದಿ